## ಪುರುಷರಿಗೂ ಗರ್ಭ ನಿರೋಧಕ

'ಗಂಡಸರ ಬದ್ಧತೆ ಮೇಲೆ ಹೆಂಗಸರಿಗೆ ನಂಬಿಕೆ ಇಲ್ಲ' ಎನ್ನುವ ಅಂಶ ಈಗ ಮತ್ತೊಮ್ಮೆ ಸಾಬೀತಾದಂತಾಗಿದೆ. ಕೇವಲ ಮಹಿಳೆಯರಿಗೇ ಅಲ್ಲದೆ ಈಗ ಪುರುಷರಿಗೂ ಸಹ ಗರ್ಭನಿರೋಧಕ ಗುಳಿಗೆಗಳು ಮಾರುಕಟ್ಟೆ ಪ್ರವೇಶಿಸುತ್ತಿರುವುದೇ ಇದಕ್ಕೆ ಕಾರಣ.

ಗುಳಿಗೆ ಏನೋ ಮಾರುಕಟ್ಟೆ ಪ್ರವೇಶಿಸುತ್ತಿದೆ, ಆದರೆ ಇದಕ್ಕೆ ಪುರುಷರ ಒಪ್ಪಿದ್ದಾರೆಯೇ.. ಎಂಬುದು ದೊಡ್ಡ ಪ್ರಶ್ನೆ. 'ಒಪ್ಪಿದರೂ ಇದು ಎಷ್ಟು ಸುರಕ್ಷಿತ' ಎಂಬ ಮತ್ತೊಂದು ಪ್ರಶ್ನೆ ಪುರುಷರ ತಲೆ ಕೊರೆಯುತ್ತಿದೆ. ಇದಕ್ಕೆಂದೇ ಈಶಾನ್ಯ ಇಂಗ್ಲೆಂಡ್‌ನ ಟೀಸೈಡ್ ವಿಶ್ವವಿದ್ಯಾಲಯದ ವಿಜ್ಞಾನಿಗಳು 380 ಮಂದಿ (140 ಪುರುಷರು ಹಾಗೂ 240 ಮಹಿಳೆಯರು)ಯನ್ನು ಈ ಅಧ್ಯಯನಕ್ಕಾಗಿ ಒಳಪಡಿಸಿದರು.

ಈ ಅಧ್ಯಯನ ನಡೆದದ್ದು ಪುರುಷರು ಇಂಥ ಗರ್ಭ ನಿರೋಧಕ ಗುಳಿಗೆ ನುಂಗಲು ಸಿದ್ಧರಿದ್ದಾರೆಯೇ ಇಲ್ಲವೇ ಎಂದು ತಿಳಿಯಲು! ಅಧ್ಯಯನದಲ್ಲಿ ಭಾಗವಹಿಸಿದ ಪುರುಷರು ಗುಳಿಗೆ ನುಂಗಲು ತಯಾರಿದ್ದೇವೆ ಎಂದು ಹೇಳಿದ್ದಾರೆ. ಆದರೆ ಮಹಿಳೆಯರಿಗೆ ಈ ಬಗ್ಗೆ ಕೊಂಚ ಅನುಮಾನ. ಏಕೆಂದರೆ ಅವರ ಸಂಗಾತಿ ನಿತ್ಯ ಈ ಗುಳಿಗೆ ನುಂಗುವುದನ್ನು ಮರೆತರೆ? ಎಂಬ ಪ್ರಶ್ನೆ ಅವರಲ್ಲಿದೆ.

ಈ ಅಧ್ಯಯನ ಪ್ರದೇಶಿಕವಾಗಿ ನಡೆದಿತ್ತು. ಅಮೆರಿಕಾ ಹಾಗೂ ಆಸ್ಟ್ರೇಲಿಯಾ ಪುರುಷರಿಗೆ ವಿಭಿನ್ನ ಚಿಕಿತ್ಸೆ ಹಾಗೂ ಈಶಾನ್ಯ ಯೂರೋಪ್‌ನ ಪುರುಷರಿಗೆ ಬೇರೆ ಬಗೆಯ ಚಿಕಿತ್ಸೆಗಳನ್ನು ನೀಡಲು ಚಿಂತಿಸಲಾಯಿತು. ಏಕೆಂದರೆ ಯೂರೋಪ್ ಪುರುಷರು ವೈದ್ಯರ ಬಳಿ ಆಗಾಗ್ಗೆ ಹೋಗುವುದಿಲ್ಲ. ಹೀಗಾಗಿ ಈ ಭಾಗದ ಪುರುಷರಿಗೆ ಗರ್ಭ ನಿರೋಧಕ ಗುಳಿಗೆ ನುಂಗಲು ಮಾಡುವ ಯೋಜನೆ ವಿಭಿನ್ನ ಮಾದರಿಯಲ್ಲೇ ಸಾಗಬೇಕಿತ್ತು.

ಗರ್ಭ ನಿರೋಧಕ ಗುಳಿಗೆ ನುಂಗುವಲ್ಲಿ ಮಹಿಳೆಯರಿಗೆ ಇರುವಷ್ಟು ಬದ್ಧತೆ ಪುರುಷರಲ್ಲಿ ಇಲ್ಲವಂತೆ. ಜತೆಗೆ ಒಂದೊಮ್ಮೆ ಪುರುಷ ಗುಳಿಗೆ ತೆಗೆದುಕೊಳ್ಳುವುದನ್ನು ಮರೆತರೆ ಕಷ್ಟ ಪಡಬೇಕಾದವಳು ಮಹಿಳೆಯಲ್ಲವೇ? ಹೀಗಾಗಿ ಪುರುಷ ಗರ್ಭ ನಿರೋಧಕ ಗುಳಿಗೆ ಕುರಿತಂತೆ ಪುರುಷರಿಗಿಂತ ಮಹಿಳೆಯರೇ ಹೆಚ್ಚು ಚಿಂತೆಗೀಡಾಗಿದ್ದಾರೆ!

## ಬಣ್ಣ ಬದಲಿಸುವ ಬ್ಯಾಂಡೇಜ್!

ಬಣ್ಣ ಬದಲಾಯಿಸುವ ಊಸವರಳ್ಳಿ ಗೊತ್ತು. ಆದರೆ ಬಣ್ಣ ಬದಲಾಯಿಸುವ ಬ್ಯಾಂಡೇಜ್ ಬಹುತೇಕರಿಗೆ ಗೊತ್ತಿದ್ದಂತಿಲ್ಲ. ಇದೊಂದು ಹೊಸ ಬಗೆ ಬ್ಯಾಂಡೇಜ್. ಗಾಯ ಗುಣವಾಗುವ ಪ್ರಕ್ರಿಯೆಯನ್ನು ಅರಿತು ಅದಕ್ಕೆ ತಕ್ಕಂತೆ ಬಣ್ಣವನ್ನು ಬದಲಾಯಿಸುತ್ತದೆ. ಹೀಗಾಗಿ ಗಾಯದ ಸ್ಥಿತಿಗತಿ ಅರಿಯಲು ಪದೇ ಪದೇ ಬ್ಯಾಂಡೇಜ್ ತೆಗೆದು ನೋಡುವ ಪರಿಸ್ಥಿತಿ ತಲೆದೋರದು. ಇಂಥದ್ದೊಂದು ಸಂಶೋಧನೆಯನ್ನು ಫ್ರಾನ್‌ಹಾಫರ್ ಸಂಶೋಧನಾ ಸಂಸ್ಥೆ ನಡೆಸಿದೆ.

ಸಣ್ಣ ಪುಟ್ಟ ಗಾಯಗಳಾದರೆ ಕೆಲವೇ ದಿನಗಳಲ್ಲಿ ಅದು ಗುಣವಾಗಲಿದೆ. ಆದರೆ ದೊಡ್ಡ ಗಾಯಗಳಿಗೆ ಬ್ಯಾಂಡೇಜ್ ಮಾಡಿದ ನಂತರ ಗಾಯ ಒಣಗಿದೆಯೇ ಎಂದು ನೋಡಲು ಪುನಃ ತೆಗೆಯುವುದು ರೋಗಿಗೆ ಸಹಿಲಸಾಧ್ಯ ನೋವು ನೀಡಬಹುದು. ಜತೆಗೆ ಸೋಂಕು ಹರಡಲು ಕಾರಣವಾಗಬಹುದು.

'ಆದರೆ ಗಾಯಕ್ಕೆ ಈ ಬ್ಯಾಂಡೇಜ್ ಹಾಕುವುದರಿಂದ ಸೋಂಕು ಹರಡಿದ್ದೇ ಆದಲ್ಲಿ ಬ್ಯಾಂಡೇಜ್ ನೇರಳೆ ಬಣ್ಣಕ್ಕೆ ತಿರುಗುತ್ತದೆ. ಇದು ಬ್ಯಾಂಡೇಜ್‌ನಲ್ಲಿರುವ ಕೆಲ ರಾಸಾಯನಿಕ ಈ ಬಣ್ಣ ಬದಲಾವಣೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಗಾಯದ ಸೋಂಕು ಹೆಚ್ಚಾದಲ್ಲಿ ಅದರ ಪಿಎಚ್ ಮೌಲ್ಯವೂ ಹೆಚ್ಚಾದಲ್ಲಿ ಅದು ಆ್ಯಸಿಡ್‌ನಿಂದ ಆಲ್ಕಲಿನ್‌ಗೆ ಬದಲಾಗುತ್ತಿರುವ ಸಂದೇಶವಾಗಿದೆ. ಹೀಗಾಗಿ ಪಿಎಚ್ ಮೌಲ್ಯ 6.5ರಿಂದ 8.5ಕ್ಕೆ ಏರಿಕೆಯಾದಲ್ಲಿ ಬ್ಯಾಂಡೇಜ್ ಬಣ್ಣ ಬದಲಾಗಲಿದೆ' ಎಂದು ಈ ಸಂಶೋಧನಾ ತಂಡದ ಹಿರಿಯ ವಿಜ್ಞಾನಿ ಡಾ.ಸಬಿನ್ ಟ್ರಪ್ ಹೇಳುತ್ತಾರೆ.

## ನಮಗೇಕೆ 'ಕೊಬ್ಬು' ಹೆಚ್ಚು?



ನಾವೇಕೆ ಸ್ಥೂಲಕಾಯಿಗಳಾಗುತ್ತಿದ್ದೇವೆ ಎಂಬ ಪ್ರಶ್ನೆಯನ್ನು ಯಾರ ಮುಂದೆಯಾದರೂ ಇಟ್ಟರೆ 'ಹೆಚ್ಚು ತಿನ್ನುತ್ತೇವೆ ಹಾಗೂ ಕಡಿಮೆ ವ್ಯಾಯಾಮ ಮಾಡುತ್ತೇವೆ' ಎಂಬ ನೇರ ಉತ್ತರ ದೊರಕಬಹುದು. ಆದರೆ ಅಲಬಾಮಾ ವಿಶ್ವವಿದ್ಯಾಲಯದ ಸ್ಥೂಲಕಾಯಿಗಳ ವಿಭಾಗ ಸಂಶೋಧಕ ಡೇವಿಡ್ ಬಿ.ಅಲ್ಲಿಸನ್ ಅವರ ಲೆಕ್ಕಾಚಾರವೇ ಬೇರೆ.

ಪ್ರಕೃತಿಯಲ್ಲಿ ಆಹಾರ ಸ್ವರೂಪ ಬದಲಾಗುತ್ತಿದೆಯಂತೆ. ಇದಕ್ಕಾಗಿ 12 ಬಗೆಯ ಪ್ರಾಣಿಗಳನ್ನು ಅವರ ಪ್ರಯೋಗಕ್ಕೆ ಒಳಪಡಿಸಿದರು. ಇವುಗಳಲ್ಲಿ ಗಂಡು ಹಾಗೂ ಹೆಣ್ಣು ಪ್ರಬೇಧಗಳನ್ನು ಬೇರ್ಪಡಿಸಲಾಯಿತು. ಇದರಿಂದ ಇವರ ಬಳಿ 24 ಪ್ರಾಣಿ ಸಮೂಹ ಇದ್ದಂತಾಯಿತು. ಇದರಲ್ಲಿ ಕೋತಿ, ಚಿಂಪಾಂಜಿ, ನಾಯಿ, ಬೆಕ್ಕು ಇತ್ಯಾದಿ ಪ್ರಾಣಿಗಳು ಇದ್ದವು. ಈ 24ರಲ್ಲಿ ಆಧುನಿಕ ಆಹಾರ ತಿಂದ 23 ಪ್ರಾಣಿಗಳ ದೇಹ ತೂಕ ಹೆಚ್ಚಾಗಿತ್ತು.

ಇದಕ್ಕೆ ಕಾರಣಗಳನ್ನು ಹುಡುಕಿದಾಗ ಸುಲಭವಾಗಿ ದಕ್ಕುವ ಆಹಾರ ಮೊದಲ ಕಾರಣ. ಹೀಗಾಗಿ ಪ್ರಯತ್ನವಿಲ್ಲದೆ ಆಹಾರ ಸಿಕ್ಕಂತಾಯಿತು. ಮನುಷ್ಯರಲ್ಲಾದರೆ ಯಂತ್ರಗಳ ಸಹಾಯದಿಂದ ಶ್ರಮವಿಲ್ಲದೆ ಕೆಲಸ ಸಾಗುವ ತಂತ್ರಜ್ಞಾನ ಬೆಳೆದಿರುವುದರಿಂದಲೂ ಸ್ಥೂಲಕಾಯ ಹೆಚ್ಚಾಗುತ್ತಿರುವ ಸಂಗತಿಯನ್ನು ಈ ತಂಡ ಗುರುತಿಸಿದೆ.

ಹಗಲು ಬೆಳಕಿಗಿಂತ ದೀಪದ ಬೆಳಕಿನಲ್ಲೇ ಜನ ಹೆಚ್ಚು ಹೊತ್ತು ಕಳೆಯುವುದರಿಂದ ರಾತ್ರಿ ಆಹಾರ ಸೇವನೆಯಲ್ಲಿ ಕೊಂಚ ಬದಲಾವಣೆಯಾಗಿರುವುದೂ ಸಹ ಸ್ಥೂಲಕಾಯ ಹೆಚ್ಚಾಗಲು ಕಾರಣ.

ವೈರಾಣು ಸೋಂಕು ಸ್ಥೂಲಕಾಯಕ್ಕೆ ಮತ್ತೊಂದು ಕಾರಣ. ಅಡಿನೋವೈರಾಣು–36 ಸ್ಥೂಲಕಾಯಕ್ಕೆ ಕಾರಣವಾಗುವ ವೈರಾಣು ಎಂದು ಈಗಾಗಲೇ ತಿಳಿದಿದೆ. ಹೀಗಾಗಿ ಎಡಿ36 ಸಹ ಸೋಂಕಿನ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತಿವೆ.

■ ಐಎಎನ್‌ಎಸ್


UNIVERSAL
COACHING CENTRE
IF SOME ONE ELSE CAN CRACK IT, WELL...U CAN ALSO
IAS 2011
IAS CSAT 2011
G. S Paper 1 & Paper 2
ABOUT UCC: UCC is the solitary name in the world of competitive examination especially for training the rural and urban youths of Karnataka since from 1998.
ಹೆಜ್ಜೆ ಗುರುತು : ಯಶಸ್ವಿ 87 IAS / IPS / IFS ಅಧಿಕಾರಿಗಳು, 82 KAS ಮತ್ತು ಇತರೆ ಅಧಿಕಾರಿಗಳು, ಕರ್ನಾಟಕ ರಾಜ್ಯ ಹಾಗೂ ಇತರೆ ರಾಜ್ಯಗಳಲ್ಲಿಯೂ ಸೇರಿ ಒಟ್ಟು 637 ಅಧಿಕಾರಿಗಳು ಸರಕಾರಿ ಸೇವೆಯಲ್ಲಿ ಇರುವುದು ಯುಸಿಸಿಯ ಹೆಮ್ಮೆ.
Week end
PUBLIC ADMINISTRATION
ANTHROPOLOGY
mains from December 18
IAS CSAT WORKSHOP
ON DECEMBER 28TH
by Ramrao from Hydrabad
Rank Holders

Soumya C Rank - 11
Ravi D K Rank - 34
Dr. Vinay T G Rank - 50
Manjushri N. Rank 65
Dr. Venkatesh M. V. Rank - 76
Deepa Mudhol Rank 87
Yashwanth Kumar G. V. Rank 107
Dr. Srinivas Rank - 149
Harish N Rank - 186
Chethan Rank 213
Universal
Coaching Centre

Shri. R. Upendra Shetty
Director
No. 2922 / 20, Chord Road,
RPC Layout, Near Atthiguppe Bus Stop,
Vijayanagar, Bangalore - 560040.
Ph: 080-2339 6403 / 409, 2339 7437
M: 9845512052, 9686664985
www.ucc.co.in